ದಿನಾಂಕಃ 20.08.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಂ.ಎಸ್.ಜಿ. ವಕೀಲರಿಂದ:**

**6.** ನಾನು ಹಾಜರಪಡಿಸಿರುವ ನಕ್ಷೆಗಳು ರಸ್ತೆಗೆ ಸಂಬಂದಪಟ್ಟದ್ದಲ್ಲ ಎಂದರೆ ಸರಿಯಲ್ಲ. ಸದರಿ ನಕ್ಷೆಗಳು ಜಮೀನಿಗೆ ಮಾತ್ರ ಸಂಬಂದಪಟ್ಟದು ಎಂದರೆ ಸರಿಯಲ್ಲ. ನಿಪಿ-4 ಮತ್ತು 5 ರ ನಕ್ಷೆಗಳಲ್ಲಿ ರಸ್ತೆಯನ್ನು ತೋರಿಸಿದ್ದಾರೆ. ಪದ್ಮಮ್ಮ ಮತ್ತು ಹೆಚ್.ಎಂ.ಚಂದ್ರರವರ ಪರಿಚಯ ನನಗೆ ಇದೆ. ಅವರು ನಮ್ಮ ಊರಿನವರು ಆದರೆ ಸಂಬಂಧಿಕರಲ್ಲ. ಪದ್ಮಮ್ಮ ಮತ್ತು ಹೆಚ್.ಎಂ.ಚಂದ್ರ ರವರು ಅಂಗಡಿ ಗ್ರಾಮದ ಸರ್ವೆ ನಂ.235 ರ ಜಮೀನು ತಮಗೆ ಸೇರಿದ್ದು ಎಂದು ಹೇಳಿಕೊಂಡು 1 ನೇ ಪ್ರತಿವಾದಿಯವರ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಪದ್ಮಮ್ಮ ಮತ್ತು ಹೆಚ್.ಎಂ.ಚಂದ್ರರವರೊಂದಿಗೆ ನ್ಯಾಯಾಲಯಕ್ಕೆ ಬರುತ್ತಿದ್ದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸರ್ವೆ ನಂ.250 ರ 5 ಎಕರೆ ಜಮೀನನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡುವಾಗ ಸರ್ವೆ ಅಳತೆ ಮಾಡಿಸಿಯೇ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಮಾರಾಟ ಮಾಡುವ ಮುನ್ನ ಅದರ ಸ್ವಾಧೀನ 1 ನೇ ಪ್ರತಿವಾದಿಯ ಬಳಿ ಇತ್ತು ಎಂದರೆ ನನಗೆ ಗೊತ್ತಿಲ್ಲ.

**7.** 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರಲಿಲ್ಲ. ಆದರೆ ಮಾರಾಟ ಮಾಡಿದ 15 ದಿನಗಳ ನಂತರ ನನಗೆ ತಿಳಿದುಬಂತು. ಈ ರೀತಿ 2020-21 ರಲ್ಲಿ ಮಾಹಿತಿ ತಿಳಿಯಿತು. 2 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇರುವ ಸರ್ವೆ ನಂ.250 ರ 5 ಎಕರೆ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು, ಸ್ವಾಧೀನ ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನ ಸಂಬಂದ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ. ನಾನು ದಾವಾ ಜಮೀನಿಗೆ ಸುಳ್ಳು ಚಕ್ಕುಬಂದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಜಮೀನಿಗೆ ಬೇಲಿ ಹಾಕಲು ಬಂದಿದ್ದರು ಎಂದು ಹೆಳಿರುವ ಸಂಬಂದ ಪೊಲೀಸರಿಗೆ ದೂರು ಕೊಟ್ಟಿಲ್ಲ. ಪ್ರತಿವಾದಿಗಳು ದಾವಾ ಜಮೀನಿಗೆ ಬೇಲಿ ಹಾಕಲು ಬಂದಿದ್ದರು ಎಂದು ವಾದಪತ್ರದಲ್ಲಿ ಬರೆಸಿದ್ದೇನೆ. ಬೇಲಿ ಹಾಕಲು ಬೇಕಾದ ಸರಂಜಾಮುಗಳನ್ನು ಪ್ರತಿವಾದಿಗಳು ತಂದಿದ್ದರು ಎಂದು ಪೋಟೋಗಳನ್ನು ಹಾಜರುಪಡಿಸಿಲ್ಲ. ಆ ರೀತಿ ಪೋಟೋ ತೆಗೆಯಲು ಯಾವುದೇ ತೊಂದರೆ ಇರಲಿಲ್ಲ. ಪ್ರತಿವಾದಿಗಳು ದಾವಾ ಜಮೀನಿಗೆ ಬೇಲಿ ಹಾಕಿದ ಸಂಬಂದ ಈ ದಾವೆಯನ್ನು ಸಲ್ಲಿಸಿದ್ದೇನೆ.

**8.** 2 ನೇ ಪ್ರತಿವಾದಿಯ ಬೇರೆ ಊರಿನಿಂದ ಬಂದು 1 ನೇ ಪ್ರತಿವಾದಿಯಿಂದ ಜಮೀನು ಖರೀದಿಸಿರುವ ಕಾರಣ ಅವರಿಗೆ ತೊಂದರೆ ಕೊಡುವ ಉದ್ದೇಶಕ್ಕಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯುವ ಅರ್ಹತೆ ನನಗಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಸಂಬಂಧಿಕರಲ್ಲ. 1 ನೇ ಪ್ರತಿವಾದಿ ಗಂಡ ಮೃತರಾಗಿದ್ದಾರೆ ಎಂದರೆ ಸರಿ. ಈ ಕಾರಣಕ್ಕಾಗಿ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿಕೊಂಡು,

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿನ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.